ಸಾವು ಮತ್ತು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಕ್ಯಾಸನೂರು ಅರಣ್ಯ ಖಾಯಿಲೆ (ಮಂಗನ ಖಾಯಿಲೆ) 1956ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕ್ಯಾಸನೂರಿನಲ್ಲಿ ಮೊಟ್ಟಮೊದಲು ಕಾಣಿಸಿಕೊಂಡಿದ್ದು. ಅಲ್ಲಿಂದ ಶಿವಮೊಗ್ಗ, ಸಾಗರ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಹಾಗೂ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ಹರಡುತ್ತಾ ಪ್ರತಿ ವರ್ಷವೂ ಈ ಕಾಯಿಲೆಯಿಂದ ಅನೇಕ ಜನರು ತುತ್ತಾಗಿ ಮರಣಗಳು ಸಂಭವಿಸಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕಾಯಿಲೆಯ ಪರಿಸ್ಥಿತಿಯು ಈ ಕೆಳಕಂಡಂತಿದೆ.

| ವರ್ಷ | ಜಿಲ್ಲೆ | ತಾಲ್ಲೂಕು | ರೋಗ ತಗಲಿದವರ ಸಂಖ್ಯೆ | ಕೆ.ಎಫ್.ಡಿ ದೃಢಪಟ್ಟ ರೋಗಿಗಳ ಸಂಖ್ಯೆ | ಮರಣ ಹೊಂದಿದ ಸಂಖ್ಯೆ | ಕೆ.ಎಫ್.ಡಿ. ಎಂದು ದೃಢಪಟ್ಟ ಮರಣದ ಸಂಖ್ಯೆ |
|---|---|---|---|---|---|---|
| 1990 | ಶಿವಮೊಗ್ಗ | ತೀರ್ಥಹಳ್ಳಿ | 1033 | 321 | 12 | 8 |
| | | ಹೊಸನಗರ | 72 | 20 | – | – |
| | | ಶಿವಮೊಗ್ಗ | 18 | 8 | 1 | 1 |
| | ಉತ್ತರಕನ್ನಡ | ಹೊನ್ನಾವರ | 166 | 58 | 17 | – |
| | | ಕುಮುಟ | 11 | 3 | – | – |
| | | ಭಟ್ಕಳ | 7 | 2 | 1 | 1 |
| | | ಅಂಕೋಲ | 2 | – | – | – |
| | | ಒಟ್ಟು | 1809 | 412 | 30 | 10 |
| 1991 | ಶಿವಮೊಗ್ಗ | ತೀರ್ಥಹಳ್ಳಿ | 562 | 83 | 1 | – |
| | | ಹೊಸನಗರ | 111 | 13 | 1 | – |
| | | ಶಿವಮೊಗ್ಗ | 4 | 2 | – | – |
| | | ಸೊರಬ | 2 | – | – | – |
| | ಉತ್ತರಕನ್ನಡ | ಭಟ್ಕಳ | 117 | 7 | 6 | 4 |
| | | ಹೊನ್ನಾವರ | 143 | 29 | 6 | 4 |
| | | ಸೂಪಾ | 20 | 3 | – | – |
| | | ಎಲ್ಲಾಪುರ | 5 | 5 | 2 | 1 |
| | ದಕ್ಷಿಣ ಕನ್ನಡ | ಬೆಳ್ತಂಗಡಿ | 3 | – | – | – |
| | | ಒಟ್ಟು | 967 | 142 | 16 | 9 |